ಅಮ್ಮನಿಗೆ ಹೆಚ್ಚು ನಡೆಯಲಾಗುತ್ತಿರಲಿಲ್ಲ. ಹೀಗಾಗಿ ಅರ್ಧವೇನು, ಕಾಲು ಕಿ.ಮೀ. ಹೋಗಲೂ ಅನ್ವರ್ ಬೇಕಾಗುತ್ತಿದ್ದ. 'ಅನ್ವರ್ ಬಂದಾನೇನು?' ಎಂದು ಕೇಳುತ್ತಲೇ ಅಮ್ಮ ಚಪ್ಪಲಿ ಹಾಕುತ್ತಿದ್ದಳು. ಅವನೂ, 'ಅವ್ವಾರ... ಬರ್ರಿ'ಎನ್ನುತ್ತ ಅವಳ ಕೈ ಹಿಡಿದು ಆಟೊ ಏರಿಸಿ ಬ್ಯಾಂಕಿಗೆ... ಪೋಸ್ಟ ಆಫೀಸಿಗೆ ಕರೆತಂದು... ತಿರುಗಿ ಮನೆ ಮುಟ್ಟಿಸುತ್ತಿದ್ದ. ನಮ್ಮ ಶಾಪಿಂಗ್ ತಾಣಗಳು ಖಡೇಬಜಾರ್, ಮಾರುತಿಗಲ್ಲಿ, ದೇಶಮುಖ ರೋಡ್‌ಗಳೆಲ್ಲ ಅವನಿಗೆ ಗೊತ್ತು. ನೆಂಟರ, ಸ್ನೇಹಿತರ ಮನೆಯ ವಿಳಾಸಗಳೆಲ್ಲ ಕಂಠಪಾಠ. ಹೆಸರು ಹೇಳಿದರೆ ಸಾಕು... ಆಟೊ ಅವರ ಮನೆಗೆ ಓಡುತ್ತಿತ್ತು. ರಾತ್ರಿ ಎಷ್ಟೊತ್ತಾದರೂ ಕಾದು ಕರೆತರುತ್ತಿದ್ದ. ಅಕಸ್ಮಾತ್ ತನಗೆ ಆಗದಿದ್ದರೆ ಸ್ನೇಹಿತರನ್ನು ಕಳಿಸುತ್ತಿದ್ದ. ನಾವು ತಿನ್ನುವ ವಡಾಪಾವ್, ಪಾವ್‌ಭಾಜಿಯಲ್ಲಿ ಅವನಿಗೂ ಮೀಸಲು ಇದ್ದೇ ಇರುತ್ತಿತ್ತು. ಎಷ್ಟೋ ಬಾರಿ ಶಾಪಿಂಗ್ ಮಾಡುವಾಗ ದುಡ್ಡು ಕಡಿಮೆ ಬಿದ್ದರೆ ಅವನಿಂದಲೇ ಸಾಲ ಪಡೆದು ಮರಳಿ ಒಟ್ಟಿಗೆ ಕೊಟ್ಟದ್ದಿದೆ. ನಂಬಿಗೆಯ ಬಂಟ ಎನ್ನಲಡ್ಡಿಯಿಲ್ಲ. ನನ್ನ ಮಕ್ಕಳು ಕೂಡ "ಅನ್ವರ್ ಅಂಕಲ್"ಎಂದು ಮುಂದೆ ಕುಳಿತು ಗಲಾಟೆ ಮಾಡುತ್ತಿದ್ದರು. ಚಿಕ್ಕ ರೌಂಡ್ ಹಾಕಿಸುತ್ತಿದ್ದುದೂ ಇತ್ತು. ಬೆಳಗಾವಿಯ ಪ್ರಯಾಣ ಮುಗಿಸಿ ಲೆಕ್ಕ ಬರೆಯುವಾಗ ಅನ್ವರ್‌ನ ಆಟೋಕ್ಕೆ ಕೊಟ್ಟ ಮೊತ್ತ ನೋಡಿ ಎದೆ 'ಗಕ್' ಎನ್ನುತ್ತಿತ್ತು. ನಾವು ಬೆಳಗಾವಿಗೆ ಬಂದರೆ ಸಾಕು ಅನ್ವರ್‌ನ ಸ್ನೇಹಿತರೆಲ್ಲ 'ಲಾಟರಿ ಹತ್ತಿತು'ಎಂದೇ ಕಾಲೆಳೆಯುತ್ತಿದ್ದರಂತೆ...

ದೂರ ದೂರ ಓಡುವಾಗ... ಆಟೋದಲ್ಲಿ ಕಾಯುವಾಗ ಅವನ ಮನೆಯ ಕಥೆ ಬಿಚ್ಚಿಕೊಳ್ಳುತ್ತಿತ್ತು. "ನನ್ನ ಹೆಂಡ್ತಿ ರುಕ್ಸಾನಾಗ ನಮ್ಮ ತಾಯಿ ಮತ್ತ ತಂಗಿ ಕೂಡಿ ಭಾಳ ಕಾಟ ಕೊಡ್ತಾರ್ರಿ. ಮಕ್ಕಳಾಗಿಲ್ಲಂತ ಹಂಗಸ್ತಾರ್ರಿ" ಎಂದು ತೋಡಿಕೊಳ್ಳುತ್ತಿದ್ದ. ಕ್ರಮೇಣ ಅವನಿಗೆ ಅವಳಿ ಮಕ್ಕಳಾದವು. ಸಂತಸ ಹಂಚಿಕೊಂಡಿದ್ದ. ಪ್ರತಿಬಾರಿ ಬೆಂಗಳೂರಿನಿಂದ ಬರುವಾಗ ನಾನು ಆ ಮಕ್ಕಳಿಗಾಗಿ ಮೈಸೂರುಪಾಕು... ಕೋಡುಬಳೆಯ ಪ್ಯಾಕೆಟ್ಟು, ಚಾಕಲೇಟು ತಂದು ಕೊಡುತ್ತಿದ್ದೆ. 'ಖುಷೀಲೆ ತಿಂತಾರ್ರಿ. ಮತ್ತ ಮೈಸೂರಪಾಕ ಬೇಕಾದಾಗೆಲ್ಲಾ ಆಂಟಿಗೊಳು ಯಾವಾಗ ಬರ್ತಾರು?' ಅಂತ ಕೇಳ್ತಾರ್ರಿ" ಎಂದು ಹೇಳುತ್ತಿದ್ದ. "ತಂಗೀದು ಮದಿವ್ಯಾಗವಲ್ಲತು. ಭಾಳ ಧಪ್ಪ ಇದ್ದಾಳ್ರಿ. 'ಡಯಟ್ ಮಾಡಿ ಜರಾ ಸಣ್ಣಾಗು' ಅಂದರ ಸಿಟ್ಟಿಗೆ ಬರತಾಳ್ರಿ. ಯಾವ ವರಾನೂ ಒಪ್ಪವಲ್ಲುರಿ" ಎಂದು ನೋವಿನಿಂದ ಹೇಳುತ್ತಿದ್ದ. "ಅನ್ನ ಕಡಿಮಿ ಮಾಡಿ ಆದಷ್ಟು ಹಿಟ್ಟಿನ ಪದಾರ್ಥ ಜಾಸ್ತಿ ತಿನ್ನಲಿ"ಎಂದು ನಾನು ಡಯಟಿಷಿಯನ್‌ಳಂತೆ ಹೇಳುವುದು ನಡೆದೇ ಇರುತ್ತಿತ್ತು. "ಇವತ್ತ ಪೋದ್ದಾರ ಕಡೆಯಿಂದ ಭಂಗಾರದ ನೆಕ್ಲೇಸ್ ತರಬೇಕು ಅನ್ವರ್. ತಯಾರಾಗೇದಂತ" ಎಂದರೆ ಸಾಕು "ಮತ್ತ ಬ್ಯಾರೇ ಕೆಲಸಾ ಏನೂ ಇಟಗೋಬ್ಯಾಡ್ರಿ ಮಾರ್ಕೆಟ್‌ನ್ಯಾಗ. ಸೀದಾ ಮನಿಗೆ ಬರೂಣು. ಖರೀದಿಗೆ ಬೇಕಾದ್ರ ಮತ್ತ ನಾಳೆ ಬರಾಕಂತ್ರಿ"ಎಂದು ಹಿತೈಷಿಯಂತೆ ಹೇಳುತ್ತಿದ್ದ. ಪರಿಚಿತ ಅಂಗಡಿಗಳಲ್ಲಿ ಸಾಮಾನು ಕೊಡಿಸಿ ಅವುಗಳನ್ನು ಹೊತ್ತು ಮಾರ್ಕೆಟ್‌ನಲ್ಲಿ ನಡೆಯುತ್ತ ಕೆಲವೊಮ್ಮೆ ಆಪದ್ಬಾಂಧವನಾಗುತ್ತಿದ್ದ.

ಅನ್ವರ್ ಸುಂದರನೇನಲ್ಲ. ಎಣ್ಣೆಗೆಂಪಿನ ಮುಖದಲ್ಲಿ ದುಂಡು ಮೂಗು, ಮಚ್ಚೆ, ಮೊಡವೆಗಳೂ ಸೇರಿ ಮುಖದ ಅಂದ ಕೆಟ್ಟಿತ್ತು. ಆದರೆ ಆರಡಿ ಎತ್ತರದ ದೃಢಕಾಯ. ನಮಗೆ ಪರಿಚಯವಾದಾಗ ಅವನ ವಯಸ್ಸು ಸುಮಾರು ನಲವತ್ತೆಂಟಿರಬೇಕು. ಮೊದಲೆಲ್ಲ ಸರಿಯಗಿ ದುಡ್ಡು ತೆಗೆದುಕೊಳ್ಳುತ್ತಿದ್ದ. ನಮ್ಮೊಂದಿಗೆ ತಿಂಡಿ ತಿಂದಾಗ ಸಂಕೋಚಗೊಂಡು 'ನಿಮಗ ತಿಳದಷ್ಟು ಕೊಡ್ರಿ' ಎನ್ನುತ್ತಿದ್ದ. ರೋಜಾ ಕಟ್ಟಾಗಿ ಪಾಲಿಸುತ್ತಿದ್ದ. ಆಗ ನಮ್ಮೊಂದಿಗೆ ಎಲ್ಲಿಗೆ ಬಂದರೂ ಒಂದು ಹನಿ ನೀರನ್ನೂ ಸೇವಿಸುತ್ತಿರಲಿಲ್ಲ. 'ನಮಾಜ್ ಮಾಡಬೇಕ್ರಿ'ಎನ್ನುತ್ತ ಹೊರಟುಬಿಡುತ್ತಿದ್ದ. ನಮ್ಮ ಹಬ್ಬಗಳ ಬಗ್ಗೆ ಅಷ್ಟೇ ಆಸಕ್ತಿ. ಪ್ರತಿ ಬಾರಿ ಗಣೇಶನ ಹಬ್ಬದಲ್ಲಿ ಸಾರ್ವಜನಿಕ ಗಣೇಶರನ್ನು ನೋಡಲು ಕರೆದೊಯ್ಯುವನು ಅವನೇ. 'ಸಮಾದೇವಿ ಗಲ್ಲಿವಳಗ ಭಾಳ ಛೊಲೊ ಮಾಡಿದಾರ್ರಿ. ಟೆಂಗಿನಕಾಯಿಲೆ ಗಣಪತಿ ಮಾಡಿದಾರು' ಎನ್ನುತ್ತ ಕರೆದೊಯ್ದು ದೂರದಿಂದಲೇ ಕೈಮುಗಿದು ಚಿಲ್ಲರೆ ಕಾಸನ್ನು ನನ್ನ ಕೈಗಿತ್ತು, 'ಜರಾ ನನ್ನ ಹೆಸರಲೆ ಹಾಕಿಬಿಡ್ರಿ ವೈನಿ' ಎನ್ನುತ್ತ ನನ್ನನ್ನು ಭಾವುಕಳನ್ನಾಗಿಸುತ್ತಿದ್ದ.

ನಂತರದ ದಿನಗಳಲ್ಲಿ ನಾವು ಕಾರು ಖರೀದಿಸಿದ ಮೇಲೆ ಕಾರಿನಲ್ಲೇ ಬೆಳಗಾವಿಗೆ ಬರುವುದು ಹೆಚ್ಚಾಯಿತು. ಆಗ ಅವನ ಅವಶ್ಯಕತೆ ಬರುತ್ತಿರಲಿಲ್ಲ. ಆದರೂ ಫೋನ್ ಮಾಡಿದಾಗ ಬಂದು ಕುಶಲ ವಿಚಾರಿಸಿಕೊಂಡು ಹೋಗುತ್ತಿದ್ದ. ಅವನು ಮನೆ